ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ.ಎ. ಪಾಟೀಲ್

ಐಬಿಸಿ ನಾಲೆಡ್ ಪಾರ್ಕ್ ಪ್ರೈವೇಟ್ ಅಮಿಟೆಡ್, ಬೆಂಗಳೂರು ಮತ್ತು ಇತರರು ವಿರುದ್ಧ ಭಾರತ ಒಕ್ಕೂಟ, ಕಾರ್ಪೊರೇಟ್ ವ್ಯವಹಾರಗಳ ಮಂತ್ರಾಲಯ, ನವದೆಹಲಿ ಮತ್ತು ಇನ್ನೊಬ್ಬರು

ಕ್ರಿಮಿನಲ್ ಅಪೀಲುಸಂಖ್ಯೆ: 6628/2019,ದಿನಾಂಕ: 24 ನೇ ಜನವರಿ, 2020.

ಆಜ್ಞೆ

ನ್ಯಾಯಮೂರ್ತಿ ಶ್ರೀ ಬಿ.ಎ. ಪಾಟೀಲ್:

ಈ ಅರ್ಜಿಯನ್ನು, ಕಂಪನಿಗಳ ಅಧಿನಿಯಮ, 2013 (ಇದರಲ್ಲಿ ಇನ್ನು ಮುಂದೆ ಸಂಕ್ಷಿಪ್ತತೆಗಾಗಿ ' ಅಧಿನಿಯಮ ' ಎಂದು ಉಲ್ಲೇಖಿಸಲಾಗಿದೆ) ಮತ್ತುದಿನಾಂಕ: 31.03.2017 ರಿಂದ ಜಾರಿಗೆ ಬರುವಂತೆ ತಿದ್ದುಪಡಿ ಮಾಡಲಾದ 182 ( 3) ನೇ ಪ್ರಕರಣದ ಅಡಿಯಲ್ಲಿ ವಿಶೇಷ ಆರ್ಥಿಕ ಅಪರಾಧಗಳ ನ್ಯಾಯಾಲಯ, ಬೆಂಗಳೂರು ಇವರ ಕಡತದಲ್ಲಿ ಇತ್ಯರ್ಥದಲ್ಲಿರುವ ದಂಡನೀಯ ಅಪರಾಧಕ್ಕಾಗಿ ಸಿ.ಸಿ.ಸಂಖ್ಯೆ:134/2019 ರಲ್ಲಿನ ದೂರಿನ ಮೇಲೆ ಪ್ರಾರಂಭಿಸಲಾದ ವ್ಯವಹರಣೆಗಳನ್ನು ರದ್ದುಗೊಳಿಸುವಂತೆ ಕೋರಿ ದಂಡ ಪ್ರಕ್ರಿಯಾ ಸಂಹಿತೆಯ 482 ನೇ ಪ್ರಕರಣದ ಅಡಿಯಲ್ಲಿ 1 ರಿಂದ 6 ರವರೆಗಿನ ಅರ್ಜಿದಾರ/ಆಪಾದಿತರು ಸಲ್ಲಿಸಿರುತ್ತಾರೆ.

2. ನಾನು, ಶ್ರೀ ಜಿ. ಕೃಷ್ಣಮೂರ್ತಿ, ಅರ್ಜಿದಾರರ ಪರ ಮಾನ್ಯ ಹಿರಿಯ ವಕೀಲರು ಮತ್ತು 2 ನೇ ಸಂಖ್ಯೆಯ ಪ್ರತ್ಯರ್ಜಿದಾರರ ಪರ ಮಾನ್ಯ ವಕೀಲರು ಮತ್ತು 1 ನೇ ಸಂಖ್ಯೆಯ ಪ್ರತ್ಯರ್ಜಿದಾರರ ಪರ ಮಾನ್ಯ ಎ.ಎಸ್.ಜಿ. ರವರ ವಾದವನ್ನು ಆಲಿಸಿದ್ದೇನೆ.

3. ಈ ಮೊಕದ್ದಮೆಯನ್ನು, ಪಕ್ಷಕಾರರ ಪರ ಹಾಜರಿರುವ ಮಾನ್ಯ ವಕೀಲರ ಸಮ್ಮತಿಯೊಂದಿಗೆ ಅಂಗೀಕಾರಕ್ಕಾಗಿ ಪಟ್ಟಿ ಮಾಡಲಾಗಿದ್ದರೂ, ಅದನ್ನು ಅಂತಿಮ ವಿಲೆಗಾಗಿ ತೆಗೆದುಕೊಳ್ಳಲಾಗಿದೆ.

4. ಮೊಕದ್ದಮೆಯ ಸಂಕ್ಷಿಪ್ತ ಸಂಗತಿಗಳು ಹೀಗಿವೆ:ಐಬಿಸಿ ನಾಲೆಡ್ ವಾರ್ಡ್ ಪ್ರೈವೆಟ್ ಲಿಮಿಟೆಡ್ ಇದು, ಕಂಪನಿಗಳ ಅಧಿನಿಯಮ, 2013 ರ ಅಡಿಯಲ್ಲಿ ಒಂದು ಕಂಪನಿಯ ನಿಗಮಿತವಾಗಿರುವ ಕಂಪನಿಯಾಗಿದ್ದು, ಇದು ಇಂಜಿನಿಯರಿಂಗ್ ಡೆವಲಪರ್ ವ್ಯವಹಾರವನ್ನು ನಡೆಸುತ್ತಿರುತ್ತದೆ.ಇದು, ಕಂಪನಿಯು ನೀಡಿದ ಘೋಷಣೆಯಲ್ಲಿ, 2016-2017ನೇ ಸಾಲಿನ ಅವಧಿಯಲ್ಲಿ ರಾಜಕೀಯ ಪಕ್ಷಗಳಿಗೆ ನೀಡಿದ ವಂತಿಗೆಯನ್ನು ಬಹಿರಂಗಪಡಿಸಿಲ್ಲವೆಂದು ದೂರಿನಲ್ಲಿ ಆರೋಪಿಸಲಾಗಿದೆ.ಈ ದೂರಿನ ಆಧಾರದ ಮೇಲೆ, ಅಧಿನಿಯಮದ 182 ( 1) ನೇ ಪ್ರಕರಣದಡಿಯಲ್ಲಿ ಮೊಕದ್ದಮೆಯನ್ನು ದಾಖಲಿಸಲಾಗಿದೆ.

5. ಅರ್ಜಿದಾರರ-ಕಂಪನಿಯ ವಿರುದ್ಧ ಮತ್ತು ಅದರ ನಿರ್ದೇಶಕರ ವಿರುದ್ಧ ಗಮನಕ್ಕೆ ತರದೇ ವ್ಯವಹರಣೆಗಳನ್ನು ಹೂಡಲಾಗಿದೆ ಎಂಬುದು ಮಾನ್ಯ ಹಿರಿಯ ವಕೀಲರ ನಿವೇದನೆಯಾಗಿದೆ.ಕಂಪನಿಯಾಗಲಿ ಇಲ್ಲವೇ ನಿರ್ದೇಶಕರಾಗಲಿ, ಅಧಿನಿಯಮದ 182 ( 3) ನೇ ಪ್ರಕರಣದ ಅಡಿಯಲ್ಲಿನ ಯಾವುದೇ ಅಪರಾಧ ಮಾಡಿರುವುದಿಲ್ಲ.2016-2017ನೇ ಸಾಲಿನಲ್ಲಿ ಘೋಷಣೆಯನ್ನು ಮಾಡಿದಾಗ, 1,51,39,924/- ರೂ.ಗಳವರೆಗೆ ಸಿ.ಎಸ್.ಆರ್. ವೆಚ್ಚಗಳು ಮತ್ತು ದೇಣಿಗೆಗಳ ಘೋಷಣೆಯ ಬಗ್ಗೆ ನಿರ್ದಿಷ್ಟವಾಗಿ ವಿವರಿಸಲಾಗಿದೆ ಎಂಬುದು ಅವರ ಮತ್ತಷ್ಟು ನಿವೇದನೆಯಾಗಿದೆ.ತತ್ಪರಿಣಾಮವಾಗಿ,ದಿನಾಂಕ: 27.2.2019 ರಂದು ಅನುಬಂಧ-ಜೆ ಮೇರೆಗೆ ಕಾರಣ ಕೇಳಿ ನೋಟೀಸನ್ನು ಹೊರಡಿಸಬೇಕಾಗಿ ಬಂದಿದೆ ಮತ್ತು ಸದರಿ ಕಾರಣ ಕೇಳುವ ನೋಟೀಸಿಗೆ, ಅವರುದಿನಾಂಕ: 6.3.2019 ರಂದು 0 ಪ್ರತ್ಯುತ್ತರವನ್ನು ನೀಡಿದ್ದು, ಅದರಲ್ಲಿ, ಅವರು ರಾಜಕೀಯ ಪಕ್ಷಕ್ಕಾಗಿ ಎಂದರೆ, ' ಆಮ್ ಆಮಿ ಪಕ್ಷಕ್ಕೆದಿನಾಂಕ: 31.12.2016 ರಂದು ಚೆಕ್ಸಂಖ್ಯೆ: 148371 ರಲ್ಲಿ 15,00,000/- ರೂ.ಗಳ ಮೊಬಲಗನ್ನು ಕಂಪನಿಯು ವಂತಿಗೆ ನೀಡಿರುತ್ತದೆಂದು ಅದನ್ನು ಜಮ್ಮು ಮತ್ತು ಕಾಶ್ಮೀರ ಬ್ಯಾಂಕಿನಲ್ಲಿ ಪಡೆಯಲಾಗಿದೆಯೆಂದು ಮತ್ತು ಸದರಿ ನೋಟೀಸಿನ ಪ್ರತ್ಯುತ್ತರದೊಂದಿಗೆ ಚೆಕ್ಕ ಪ್ರತಿಯೂ ಸಹ ಲಭ್ಯವಿರುತ್ತದೆಂದು ಅವರ ಮುಂದಿನ ನಿವೇದನೆಯಾಗಿದೆ.ಈ ಎಲ್ಲ ಸಾಕ್ಷ್ಯಾಧಾರಗಳನ್ನು ಲಭ್ಯವಾಗುವಂತೆ

ಮಾಡಲಾಗಿದ್ದರೂ, ಅವುಗಳಲ್ಲಿ ಯಾವುದನ್ನು ಗಮನಕ್ಕೆ ತೆಗೆದುಕೊಳ್ಳದೇ ಸುಳ್ಳು ದೂರನ್ನು ದಾಖಲಿಸಲಾಗಿದೆ ಎಂದು ನಿವೇದಿಸಿಕೊಂಡಿದ್ದಾರೆ.ಮುಂದುವರೆಸುತ್ತಾ ಅಧಿನಿಯಮದ 135 ನೇ ಪ್ರಕರಣದ ಮೇರೆಗೆ, ನಿಗದಿತ ನಮೂನೆಯಲ್ಲಿ ಅವರು 1,36,39,924/- ರೂ.ಗಳ ಸಿ.ಎಸ್.ಆರ್. ದೇಣಿಗೆಗಳನ್ನು ಸ್ಪಷ್ಟವಾಗಿ ಬಹಿರಂಗಪಡಿಸಿದ್ದಾರೆಂದು ಅವರ ಮತ್ತಷ್ಟು ವಾದವಾಗಿದೆ.ಅಲ್ಲದೆ, 15,00,000/- ರೂ.ಗಳ ಮೊಬಲಗನ್ನು ರಾಜಕೀಯ ಪಕ್ಷದ ನಿಧಿಗಾಗಿ ವಂತಿಗೆಯಾಗಿ ನೀಡಲಾಗಿದೆಯೆಂದು ಪ್ರತ್ಯುತ್ತರದಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ.ನಿಯಮಿಸಲಾದಂತೆ ಸಲ್ಲಿಸಲಾದ ಖರ್ಚು-ವೆಚ್ಚಗಳ ವಿವರಪಟ್ಟಿ ಮತ್ತು ಪ್ರತ್ಯುತ್ತರವನ್ನು ಒಟ್ಟಿಗೆ ಓದಿದಾಗಲೂ ಸಹ, ಸದರಿ ಘೋಷಣೆಯು ಕಾನೂನಿಗನುಸಾರವಾಗಿದೆಯೆಂದು ಸೂಚಿಸುತ್ತದೆ.ಮುಂದುವರೆಸುತ್ತಾ, ಅವರು ಅಧಿನಿಯಮದ 182 ( 3) ನೇ ಪ್ರಕರಣದ ಉಪಬಂಧಗಳಿಗೆದಿನಾಂಕ: 31.3.2017 ರಂದು ತಿದ್ದುಪಡಿಯನ್ನು ಮಾಡಲಾಗಿದೆ, ಮತ್ತು ತಿದ್ದುಪಡಿ ಮಾಡಲಾದ ಉಪಬಂಧದ ದೃಷ್ಟಿಯಲ್ಲಿ, ಕಂಪನಿಯು, ರಾಜಕೀಯಪಕ್ಷಕ್ಕೆ ನೀಡಿದ ವಂತಿಗೆಯ ಯಾವುದೇ ಮೊಬಲಗನ್ನು ತನ್ನ ಲಾಭ ಮತ್ತು ನಷ್ಟದ ಖಾತೆಯಲ್ಲಿ ಘೋಷಣೆಯನ್ನು ಬಹಿರಂಗಪಡಿಸಬೇಕೆಂಬುದು ಆಜ್ಞಾಪಕವಾಗಿರುವುದಿಲ್ಲವೆಂದು ನಿವೇದಿಸಿಕೊಂಡಿದ್ದಾರೆ.ಅಲ್ಲದೆ ವಿವರಪಟ್ಟಿಕೆಯನ್ನು ಹಣಕಾಸಿನ ವರ್ಷಕ್ಕೆ ಸೆಪ್ಟೆಂಬರ್ ತಿಂಗಳ ತರುವಾಯದ ವರ್ಷದ ಅಂತ್ಯದ ವೇಳೆಗೆ ಸಲ್ಲಿಸಲಾಗಿದೆಯೆಂಬುದು ಅವರ ಮುಂದಿನ ನಿವೇದನೆಯಾಗಿದೆ.ದಿನಾಂಕ: 01.04.2017 ರಿಂದ ಜಾರಿಗೆ ಬರುವಂತೆ ತಿದ್ದುಪಡಿಯನ್ನು ತಂದಿರುವಾಗ ಮತ್ತು ರಾಜಕೀಯ ಪಕ್ಷದ ಘೋಷಣೆಯನ್ನು ಉಲ್ಲೇಖಿಸದಿದ್ದರೆ, ಆಗ ಅಂಥ ಸಂದರ್ಭದಲ್ಲಿ, ಅದು ಅಧಿನಿಯಮದ 182 ನೇ ಪ್ರಕರಣದ ಮೇರೆಗೆ ಉದ್ದೇಶಿಸಲಾದಂತೆ ಯಾವುದೇ ರೀತಿಯ ಉಲ್ಲಂಘನೆಯಾಗುವುದಿಲ್ಲ.ಹಾಗಿದ್ದರೆ, ಅದು ಯಾವುದೇ ತಪ್ಪು ಮಾಡಿದ್ದರೂ, ಆಗ ಅದು ಯಾವುದೇ ಉದ್ದೇಶವನ್ನು ಹೊಂದಿರುವುದಿಲ್ಲ ಹಾಗೂ ಅದು 1 ನೇ ಅರ್ಜಿದಾರ/ಆಪಾದಿತನು ನೀಡಿದ ದೇಣಿಗೆಯನ್ನು ಮರೆಮಾಚಿರುವುದಿಲ್ಲ ಎಂದು ನಿವೇದಿಸಿಕೊಂಡಿದ್ದಾರೆ.ಮುಂದುವರೆ ಸುತ್ತಾ, ಕಾನೂನನ್ನು ಅಧಿನಿಯಮಿಸುವಾಗ ಕಾನೂನಿನ ಉದ್ದೇಶ ಮತ್ತು ಇತರೆ ಉದ್ದೇಶಗಳನ್ನು ಕ ಂ ಪನಿಯ ಮತ್ತು ಅದರ ನಿರ್ದೇಶಕರನ್ನು ಶಿಕ್ಷಿಸುವ ಹಾಗೆ ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ ಎಂಬುದು ಅವರ ಮುಂದಿನ ನಿವೇದನೆಯಾಗಿದೆ. ಅಲ್ಲದೆ, ಇದೊಂದು ಪ್ರತಿಷ್ಠಿತ ಕಂಪನಿಯಾಗಿದ್ದು, ಸಿ.ಎಸ್.ಆರ್.ದೇಣಿಗೆಗಳ ಅಡಿಯಲ್ಲಿ, ಇದು ಶಿಕ್ಷಣ ಸಂಸ್ಥೆಗಳು ಮತ್ತು ಇತರ ಸಂಬಂಧಿತ ಸಂಸ್ಥೆಗಳಿಗೆ ಭಾರಿ ಮೊತ್ತವನ್ನು ವಂತಿಗೆಯಾಗಿ ನೀಡಿದೆ ಮತ್ತು ದೇಶದ ಆರ್ಥಿಕತೆಗೆ ಅಡ್ಡಿಯುಂಟು D ಮಾಡುವಂಥ ಯಾವುದೇ ಲೆಕ್ಕಗಳನ್ನು ಇದು ಮರೆಮಾಚಿರುವುದಿಲ್ಲವೆಂದು ನಿವೇದಿಸಲಾಗಿದೆ.ಇದು ಬರಿಯ ಪ್ರಮಾದವಾಗಿದೆಯೇ ಹೊರತು ಉದ್ದೇಶ ಪೂರ್ವಕವಾಗಿ ಮಾಡಲಾದ ತಪ್ಪಾಗಿರುವುದಿಲ್ಲ.ಈ ಕಾರಣಗಳ ಮೇಲೆ, ಅವರು ಅರ್ಜಿಯನ್ನು ಪುರಸ್ಕರಿಸಿ ವ್ಯವಹರಣೆಗಳನ್ನು ರದ್ದುಗೊಳಿಸುವಂತೆ ಕೋರಿರುತ್ತಾರೆ.

6. ಇದಕ್ಕೆ ವಿರೋಧವಾಗಿ ಪ್ರತ್ಯರ್ಜಿದಾರರ ಪರ ಮಾನ್ಯ ವಕೀಲರು,ದಿನಾಂಕ: 01.04.2017 ಕ್ಕೆ ಮುಂಚಿತವಾಗಿ ಅಧಿನಿಯಮದ 182 ನೇ ಪ್ರಕರಣವನ್ನು ಸಂಯೋಜಿತವಾಗಿ ಓದುವ ಮೂಲಕ ಬಲವಾಗಿ ವಾದಿಸುತ್ತಾ ಅವರು ದೇಣಿಗೆಯನ್ನು O ಬಹಿರಂಗಪಡಿಸುವುದು ಕಡ್ಡಾಯವಾಗಿದೆಯೆಂದು ತೋರಿಸಲು ಹೋಗುತ್ತಾರೆ ಮತ್ತು ತಿದ್ದುಪಡಿಯ ನಂತರವೂ ಘೋಷಣೆಯನ್ನು ಪ್ರತ್ಯೇಕವಾಗಿ ಬಹಿರಂಗಪಡಿಸದೇ ಇದ್ದರೆ, ಅದನ್ನು ಅಧಿನಿಯಮದ 182 ನೇ ಪ್ರಕರಣದ ಅಡಿಯಲ್ಲಿ ಉದ್ದೇಶಿಸಲಾದಂತೆ ಕಾನೂನು ಘೋಷಣೆ ಎಂದು ಪರಿಗಣಿಸಲಾಗುವುದಿಲ್ಲ ಎಂದು ನಿವೇದಿಸಿಕೊಂಡಿದ್ದಾರೆ.ಮುಂದುವರೆಸುತ್ತಾ, ಸಲ್ಲಿಸಲಾದ ಖರ್ಚು-ವೆಚ್ಚಗಳ ವಿವರಪಟ್ಟಿಯು ಅಧಿನಿಯಮದ 135 ನೇ ಪ್ರಕರಣದ ಅಡಿಯಲ್ಲಿ ಸಂಯೋಜಿತ ಘೋಷಣೆಯಾಗಿದೆಯೆಂದು, ಅಂತೆಯೇ ಅಧಿನಿಯಮದ 182 ನೇ ಪ್ರಕರಣದ ಅಡಿಯಲ್ಲಿ ದೇಣಿಗೆಯಾಗಿದೆ ಎಂದು ನಿವೇದಿಸಿಕೊಂಡಿದ್ದಾರೆ.ಇಂಥ ಸಂದರ್ಭಗಳಲ್ಲಿ, ಅಧಿನಿಯಮದ 182 ನೇ ಪ್ರಕರಣದ ಉಪಬಂಧಗಳ ಆದೇಶವನ್ನು ನೆರವೇರಿಸಲು ಹೋಗುವುದಿಲ್ಲ.ಅಧಿನಿಯಮದ 182 ನೇ ಪ್ರಕರಣದಲ್ಲಿ ಬಳಸಲಾದ ಪದವು " ತಕ್ಕದ್ದು " ಎಂದಿದೆ.ಆ ಪ್ರಕಾರವಾಗಿ, ಆದೇಶವು, ರಾಜಕೀಯ ಪಕ್ಷಕ್ಕೆ ವಂತಿಗೆಯಾಗಿ ನೀಡಲಾಗಿರುವ ದೇಣಿಗೆಗಳು ಅವು ಏನಾದರೂ ಆಗಿರಲಿ ಪ್ರತ್ಯೇಕವಾಗಿ ಘೋಷಿಸಲು ಅರ್ಜಿದಾರರಿಗೆ| ಆಪಾದಿತರಿಗೆ ಗೊತ್ತುಪಡಿಸುತ್ತದೆ.ದಿನಾಂಕ: 27.2.2019 ರ ಕಾರಣ ಕೇಳಿ ನೀಡಿದ ನೋಟೀಸಿಗೆ,ದಿನಾಂಕ: 6.3.2019 ರಂದು ಪ್ರತ್ಯುತ್ತರವನ್ನು ನೀಡಲಾಗಿದೆ ಮತ್ತು ಅರ್ಜಿದಾರರು/ಆಪಾದಿತರು ಅವರ ಪ್ರತ್ಯುತ್ತರದಲ್ಲಿ, ಹಣಕಾಸಿನ ವಿವರಪಟ್ಟಿಗಳನ್ನು ತಯಾರಿಸುವ ಸಮಯದಲ್ಲಿ, ಕಂಪನಿಯು, ಅಧಿನಿಯಮದ 182 ( 3) ನೇ ಪ್ರಕರಣದ ಮೇರೆಗೆ ಪ್ರತ್ಯೇಕ ಬಹಿರಂಗಪಡಿಸುವಿಕೆಯ ಅಗತ್ಯೆಯನ್ನು ಅಜಾಗರೂಕತೆಯಿಂದ ತಪ್ಪಿಸಿಕೊಂಡಿದೆ ಎಂಬ ಸಂಗತಿಯನ್ನು ಸ್ಪಷ್ಟವಾಗಿ ಒಪ್ಪಿಕೊಂಡಿದ್ದಾರೆ.ಅಧಿನಿಯಮದ 182 ನೇ ಪ್ರಕರಣದ ಆದೇಶವನ್ನು,

ಅರ್ಜಿದಾರರು/ಆಪಾದಿತರು ಅನುಸರಿಸಿಲ್ಲವೆಂಬುದನ್ನು ತಾನಾಗಿಯೇ ಅದು ಸ್ಪಷ್ಟಪಡಿಸುತ್ತದೆ ಎಂದು ನಿವೇದಿಸಿಕೊಂಡಿದ್ದಾರೆ, ಒಮ್ಮೆ ಅಜಾಗರೂಕತೆಯುಂಟಾದಾಗ ಅಥವಾ ತಪ್ಪಾದಾಗ ಅದು ಮೊಕದ್ದಮೆಯನ್ನು ನಿರ್ಣಯಿಸುವಾಗ ಅಧಿವಿಚಾರಣಾ ನ್ಯಾಯಾಲಯವು ತೀರ್ಮಾನಿಸಬೇಕಾದ ವಾಸ್ತವಾಂಶದ ಪ್ರಶ್ನೆಯಾಗುತ್ತದೆಂದು ಪ್ರತ್ಯುತ್ತರದಲ್ಲಿ ನಿರ್ದಿಷ್ಟವಾಗಿ ವಾದಿಸಲಾಗಿದೆ ಎಂಬುದು ಅವರ ಮುಂದಿನ ನಿವೇದನೆಯಾಗಿದೆ.ಯಾವುದೇ ದೃಷ್ಟಿಕೋನದಿಂದ ನೋಡಿದರೂ, ಅಧಿನಿಯಮದ 182 ನೇ ಪ್ರಕರಣದ ಉಪಬಂಧಗಳನ್ನು ಅರ್ಜಿದಾರರು/ಆಪಾದಿತರು ಸರಿಯಾಗಿ ಮತ್ತು ಕಾನೂನುಬದ್ಧವಾಗಿ ಪಾಲಿಸಿಲ್ಲ ಮತ್ತು ಸದರಿ ಸಂಗತಿಯನ್ನು ಮರೆಮಾಚುವ ಉದ್ದೇಶವಿತ್ತೆಂದು ಮತ್ತು ಆ ಮೂಲಕ, ಅರ್ಜಿದಾರರು/ಆಪಾದಿತರು ಅಧಿನಿಯಮದ 182 ( 4) ನೇ ಪ್ರಕರಣದ ಅಡಿಯಲ್ಲಿ ಉದ್ದೇಶಿಸಲಾದಂಥ ಶಿಕ್ಷೆಗೆ ಹೊಣೆಯಾಗಿರುವರೆಂದು ಕಾರಣ ಕೇಳಿ ನೀಡಿರುವ ನೋಟೀಸು ಮತ್ತು ದೂರಿನಲ್ಲಿ ಸ್ಪಷ್ಟವಾಗಿ ಬಹಿರಂಗಪಡಿಸಲಾಗಿದೆ.ಈ ಕಾರಣಗಳ ಮೇಲೆ ಅವರು ಅರ್ಜಿಯನ್ನು ವಜಾಗೊಳಿಸುವಂತೆ ಕೋರಿರುತ್ತಾರೆ.

7. ನಾನು, ಪಕ್ಷಕಾರರ ಪರ ಹಾಜರಿರುವ ಮಾನ್ಯ ವಕೀಲರು ಮಾಡಿದ ನಿವೇದನೆಗಳನ್ನು ಮತ್ತು ದಾಖಲೆಗಳನ್ನು ಜಾಗರೂಕತೆಯಿಂದ ಮತ್ತು ಎಚ್ಚರಿಕೆಯಿಂದ ಪರಿಶೀಲಿಸಿರುತ್ತೇನೆ.

8. ಸಂಕ್ಷಿಪ್ತತೆಯ ಉದ್ದೇಶಕ್ಕಾಗಿ ನಾನು, 2017 ರ ತಿದ್ದುಪಡಿ ಅಧಿನಿಯಮದ ಮುಂಚಿನ ಮತ್ತುದಿನಾಂಕ: 31.3.2017 ರ ತಿದ್ದುಪಡಿ ಆಧಾರದ ಮೂಲಕ ತರಲಾದ ತಿದ್ದುಪಡಿಯ ತರುವಾಯದ ಅಧಿನಿಯಮದ 182 ನೇ ಪ್ರಕರಣವನ್ನು ಉಲ್ಲೇಖಿಸಿದ್ದೇನೆ.ಅವೆರಡನ್ನೂ ಈ ಮುಂದಿನಂತೆ ಓದಲಾಗಿದೆ:

ಕಂಪನಿ ಅಧಿನಿಯಮ, 2013 ರ 182 ನೇ ಪ್ರಕರಣ (ಹಣಕಾಸು ಅಧಿನಿಯಮ, 2017-2017 ರ ಸಂಖ್ಯೆ .7 ಕ್ಕೆ ಮೊದಲು)

"182. ರಾಜಕೀಯ ವಂತಿಗೆಗಳಿಗೆ ಸಂಬಂಧಪಟ್ಟ ನಿಷೇಧಗಳು ಮತ್ತು ನಿರ್ಬಂಧಗಳು.

( 1) ಈ ಅಧಿನಿಯಮದ ಇತರ ಯಾವುದೇ ಉಪಬಂಧದಲ್ಲಿ ಏನೇ ಇದ್ದರೂ, ಸರ್ಕಾರಿ ಕಂಪನಿಯನ್ನು ಹೊರತುಪಡಿಸಿ, ಒಂದು ಕಂಪನಿಯು ಮತ್ತು ಮೂರು ಹಣಕಾಸು ವರ್ಷಗಳಿಗಿಂತ ಕಡಿಮೆ ಇಲ್ಲದಂತೆ ಅಸ್ತಿತ್ವದಲ್ಲಿರುವ ಅಂಥ ಇತರ ಕಂಪನಿಯು, ಯಾವುದೇ ರಾಜಕೀಯ ಪಕ್ಷಕ್ಕೆ ನೇರವಾಗಿ ಅಥವಾ ಪರೋಕ್ಷವಾಗಿ ಯಾವುದೇ ಮೊಬಲಗನ್ನು ವಂತಿಗೆಯಾಗಿ ನೀಡಬಹುದು.

ಪರಂತು, ( 1) ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ಮೊಬಲಗು ಅಥವಾ ಸಂದರ್ಭಾನುಸಾರ, ಯಾವುದೇ ಹಣಕಾಸು ವರ್ಷದಲ್ಲಿ ಕಂಪನಿಯು ಹಾಗೆ ವಂತಿಗೆ ನೀಡಿರಬಹುದಾದ ಅ ಮೊಬಲಗಿನ ಒಟ್ಟು ಮೊತ್ತವು, ಮೂರು ನಿಕಟ ಪೂರ್ವದ ಹಣಕಾಸು ವರ್ಷಗಳಲ್ಲಿ ಕಂಪನಿಯ ಸರಾಸರಿ ನಿವ್ವಳ ಲಾಭದ ಶೇಕಡಾ ಏಳೂವರೆಯಷ್ಟು ಮೊತ್ತವನ್ನು ಮೀರದಂತೆ ಇರತಕ್ಕದ್ದು.

ಮತ್ತೂ ಪರಂತು, ವಂತಿಗೆಯನ್ನು ನೀಡಲು ಅಧಿಕೃತಗೊಳಿಸುವ ನಿರ್ಣಯವನ್ನು ನಿರ್ದೇಶಕರ ಮಂಡಳಿಯ ಸಭೆಯಲ್ಲಿ ಅಂಗೀಕರಿಸಿದ ಹೊರತು, ಅಂಥ ವಂತಿಗೆಯನ್ನು ಕಂಪನಿಯು ನೀಡತಕ್ಕದ್ದಲ್ಲ ಮತ್ತು ಈ ಪ್ರಕರಣದ ಇತರ ಉಪಬಂಧಗಳಿಗೆ ಒಳಪಟ್ಟು, ಅದು ಅಧಿಕೃತಗೊಳಿಸಿದ ವಂತಿಗೆಯನ್ನು ನೀಡುವುದಕ್ಕೆ ಮತ್ತು ಸ್ವೀಕರಿಸುವುದಕ್ಕೆ ಸಂಬಂಧಿಸಿದ ಅಂಥ ನಿರ್ಣಯಕ್ಕೆ ಕಾನೂನಿನ ಸಮರ್ಥನೆ ಇದೆಯೆಂದು ಭಾವಿಸತಕ್ಕದ್ದು.

( 2) ( 1) ನೇ ಉಪ-ಪ್ರಕರಣದ ಉಪಬಂಧಗಳ ಸಾಮಾನ್ಯಾನ್ವಯತೆಗೆ ಬಾಧಕವಾಗದಂತೆ,

( ಎ) ಒಂದು ಕಂಪನಿಯು ತನ್ನ ಪರವಾಗಿ ಅಥವಾ ತನ್ನ ಜವಾಬ್ದಾರಿಯಿಂದ, ತನ್ನ ತಿಳುವಳಿಕೆಯಷ್ಟರಮಟ್ಟಿಗೆ, ದೇಣಿಗೆ ಅಥವಾ ಚಂದಾ ಅಥವಾ ಸಂದಾಯವನ್ನು ನೀಡಿದ್ದಂಥ ಅಥವಾ ಮಾಡಿದ್ದಂಥ ಸಮಯದಲ್ಲಿ, ಅದು ಒಂದು ರಾಜಕೀಯ ಪಕ್ಷದ ಸಾರ್ವಜನಿಕ ಬೆಂಬಲವನ್ನು ಬಾಧಿಸುವ ಸಂಭವವಿದೆ ಎಂದು ಯುಕ್ತವಾಗಿ ಪರಿಗಣಿಸಬಹುದಾಗಿರುವ ಯಾವುದೇ ಕಾರ್ಯವನ್ನು ಕೈಗೊಳ್ಳುವ ವ್ಯಕ್ತಿಗೆ ನೀಡುವಂತೆ ಮಾಡಿರುವ ಅಂಥ ದೇಣಿಗೆ ಅಥವಾ ಚಂದಾ ಅಥವಾ ಸಂದಾಯವನ್ನು, ರಾಜಕೀಯ ಉದ್ದೇಶಕ್ಕಾಗಿ ಅಂಥ ವ್ಯಕ್ತಿಗೆ ಅಂಥ ದೇಣಿಗೆ, ಚ ಚ ಂ ಂ ದಾ ದಾ ಅಥವಾ ಅಥವಾ ಸ ಸ ಂ ಂ ದಾಯದ ದಾಯದ ಮೊಬಲಗಿನ ವಂತಿಗೆಯಾಗಿದೆಯೆಂದು ಸಹ ಭಾವಿಸತಕ್ಕದ್ದು.

(ಬಿ) ಸ್ಮರಣ ಸಂಚಿಕೆ, ಕಿರು ಹೊತ್ತಿಗೆ, ಲಘು ಪುಸ್ತಿಕೆ, ಭಿತ್ತಿಪತ್ರ ಅಥವಾ ಇನ್ನಿತರ ಸ್ವರೂಪದಲ್ಲಿರುವ ಯಾವುದೇ ಪ್ರಕಟಣೆಯಲ್ಲಿನ ಜಾಹೀರಾತಿನ ಮೇಲೆ ಕಂಪನಿಯು ನೇರವಾಗಿ ಅಥವಾ ಪರೋಕ್ಷವಾಗಿ ಭರಿಸಿದ ವೆಚ್ಚದ ಮೊಬಲಗನ್ನು,

( i) ಅಂಥ ಪ್ರಕಟಣೆಯು, ರಾಜಕೀಯ ಪಕ್ಷದ್ದಾಗಿದ್ದಲ್ಲಿ ಅಥವಾ ಆ ರಾಜಕೀಯ ಪಕ್ಷದ ಪರವಾಗಿದ್ದಲ್ಲಿ, ಅದು ಅಂಥ ರಾಜಕೀಯ ಪಕ್ಷಕ್ಕೆ ನೀಡಿದ ಅಂಥ ಮೊಬಲಗಿನ ವಂತಿಗೆಯಾಗಿದೆ ಎಂದು; ಮತ್ತು

(ii) ಅಂಥ ಪ್ರಕಟಣೆಯು, ರಾಜಕೀಯ ಪಕ್ಷದ್ದಾಗಿರದೆ ಅಥವಾ ಅದರ ಪರ ವಾಗಿರದೆ, ರಾಜಕೀಯ ಪಕ್ಷದ ಅನುಕೂಲಕ್ಕಾಗಿದ್ದಲ್ಲಿ, ಅದನ್ನು ಆ ರಾಜಕೀಯ ಪಕ್ಷಕ್ಕೆ ನೀಡಿದ ವಂತಿಗೆ ಎಂಬುದಾಗಿ,ಭಾವಿಸತಕ್ಕದ್ದು.

(3) ಪ್ರತಿಯೊಂದು ಕಂಪನಿಯು, ತನ್ನ ಲಾಭ ಮತ್ತು ನಷ್ಟದ ಲೆಕ್ಕದಲ್ಲಿ, ಆ ಲೆಕ್ಕವು ಸಂಬಂಧಪಡುವ ಹಣಕಾಸು ವರ್ಷದಲ್ಲಿ ಯಾವುದೇ ರಾಜಕೀಯ ಪಕ್ಷಕ್ಕೆ ತಾನು ವಂತಿಗೆಯಾಗಿ ನೀಡಿದ ಯಾವುದೇ ಮೊಬಲಗನ್ನು ಅಥವಾ ಮೊಬಲಗುಗಳನ್ನು, ವಂತಿಗೆಯಾಗಿ ನೀಡಿದ ಒಟ್ಟು ಮೊಬಲಗಿನ ಮತ್ತು ಅಂಥ ಮೊಬಲಗುಗಳನ್ನು ಯಾವ ಪಕ್ಷಕ್ಕೆ ವಂತಿಗೆಯಾಗಿ ನೀಡಿದೆಯೋ ಆ ಪಕ್ಷದ ಹೆಸರಿನ ವಿವರಗಳನ್ನು ನೀಡಿ ಬಹಿರಂಗಪಡಿಸತಕ್ಕದ್ದು.

(4) ಕಂಪನಿಯು, ಈ ಪ್ರಕರಣದ ಉಪಬಂಧಗಳ ಉಲ್ಲಂಘಿಸಿ ಯಾವುದೇ ವಂತಿಗೆ ನೀಡಿದರೆ, ಆ ಕಂಪನಿಯು ಹಾಗೆ ವಂತಿಗೆ ನೀಡಲಾದ ಮೊಬಲಗಿನ ಐದು ಪಟ್ಟು ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತವಾಗತಕ್ಕದ್ದು ಮತ್ತು ಕಂಪನಿಯ ಪ್ರತಿಯೊಬ್ಬ ತಪ್ಪಿತಸ್ಥ ಅಧಿಕಾರಿಯು, ಆರು ತಿಂಗಳಿಗೆ ವಿಸ್ತರಿಸಬಹುದಾದ ಅವಧಿಯವರೆಗೆ ಕಾರಾವಾಸದಿಂದ ಮತ್ತು ಹಾಗೆ ವಂತಿಗೆ ನೀಡಲಾದ ಮೊಬಲಗಿನ ಐದು ಪಟ್ಟು ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

ವಿವರಣೆ.- ಈ ಪ್ರಕರಣದ ಉದ್ದೇಶಗಳಿಗಾಗಿ, ' ರಾಜಕೀಯ ಪಕ್ಷ ಎಂದರೆ, ಜನತಾ ಪ್ರಾತಿನಿಧ್ಯ ಅಧಿನಿಯಮ, 1951 ರ (1951 ರ 43)

29 ಎ ಪ್ರಕರಣದ ಅಡಿಯಲ್ಲಿ ನೋಂದಾಯಿತವಾದ ಒಂದು ರಾಜಕೀಯ ಪಕ್ಷ.

ಕಂಪನಿಗಳ ಅಧಿನಿಯಮ, 2013 ರ 182 ನೇ ಪ್ರಕರಣ (2017 ರ ಆರ್ಥಿಕ ಅಧಿನಿಯಮ ಸಂಖ್ಯೆ .7 ರ ತರುವಾಯ)

"182. ರಾಜಕೀಯ ವಂತಿಗೆಗಳಿಗೆ ಸಂಬಂಧಪಟ್ಟ ನಿಷೇಧಗಳು ಮತ್ತು ನಿರ್ಬಂಧಗಳು.

( 1) ಈ ಅಧಿನಿಯಮದ ಇತರ ಯಾವುದೇ ಉಪಬಂಧದಲ್ಲಿ ಏನೇ ಇದ್ದರೂ, ಸರ್ಕಾರಿ ಕಂಪನಿಯನ್ನು ಹೊರತುಪಡಿಸಿ, ಒಂದು ಕಂಪನಿಯು ಮತ್ತು ಮೂರು ಹಣಕಾಸು ವರ್ಷಗಳಿಗಿಂತ ಕಡಿಮೆ ಇಲ್ಲದಂತೆ ಅಸ್ತಿತ್ವದಲ್ಲಿರುವ ಅಂಥ ಇತರ ಕಂಪನಿಯು, ಯಾವುದೇ ರಾಜಕೀಯ ಪಕ್ಷಕ್ಕೆ ನೇರವಾಗಿ ಅಥವಾ ಪರೋಕ್ಷವಾಗಿ ಯಾವುದೇ ಮೊಬಲಗನ್ನು ವಂತಿಗೆಯಾಗಿ ನೀಡಬಹುದು.

ಪರಂತು, ವಂತಿಗೆಯನ್ನು ನೀಡಲು ಅಧಿಕೃತಗೊಳಿಸುವ ನಿರ್ಣಯವನ್ನು ನಿರ್ದೇಶಕರ ಮಂಡಳಿಯ ಸಭೆಯಲ್ಲಿ ಅಂಗೀಕರಿಸಿದ ಹೊರತು, ಅಂಥ ವಂತಿಗೆಯನ್ನು ಕಂಪನಿಯು ನೀಡತಕ್ಕದ್ದಲ್ಲ ಮತ್ತು ಈ ಪ್ರಕರಣದ ಇತರ ಉಪಬಂಧಗಳಿಗೆ ಒಳಪಟ್ಟು, ಅದು ಅಧಿಕೃತಗೊಳಿಸಿದ ವಂತಿಗೆಯನ್ನು ನೀಡುವುದಕ್ಕೆ ಮತ್ತು ಸ್ವೀಕರಿಸುವುದಕ್ಕೆ ಸಂಬಂಧಿಸಿದ ಅಂಥ ನಿರ್ಣಯಕ್ಕೆ ಕಾನೂನಿನ ಸಮರ್ಥನೆ ಇದೆಯೆಂದು ಭಾವಿಸತಕ್ಕದ್ದು.

( 2) ( 1) ನೇ ಉಪ-ಪ್ರಕರಣದ ಉಪಬಂಧಗಳ ಸಾಮಾನ್ಯಾನ್ವಯತೆಗೆ ಬಾಧಕವಾಗದಂತೆ,

(ಎ) ಒಂದು ಕಂಪನಿಯು ತನ್ನ ಪರವಾಗಿ ಅಥವಾ ತನ್ನ ಜವಾಬ್ದಾರಿಯಿಂದ, ತನ್ನ ತಿಳುವಳಿಕೆಯಷ್ಟರಮಟ್ಟಿಗೆ, ದೇಣಿಗೆ ಅಥವಾ ಚಂದಾ ಅಥವಾ ಸಂದಾಯವನ್ನು ನೀಡಿದ್ದಂಥ ಅಥವಾ ಮಾಡಿದ್ದಂಥ ಸಮಯದಲ್ಲಿ, ಅದು ಒಂದು ರಾಜಕೀಯ ಪಕ್ಷದ ಸಾರ್ವಜನಿಕ ಬೆಂಬಲವನ್ನು ಬಾಧಿಸುವ ಸಂಭವವಿದೆ ಎಂದು ಯುಕ್ತವಾಗಿ ಪರಿಗಣಿಸಬಹುದಾಗಿರುವ ಯಾವುದೇ ಕಾವ್ಯವನ್ನು ನಡೆಸುವ ವ್ಯಕ್ತಿಗೆ ನೀಡುವಂತೆ ಮಾಡಿರುವ ಅಂಥ ದೇಣಿಗೆ ಅಥವಾ ಚಂದಾ ಅಥವಾ ಸಂದಾಯವನ್ನು, ರಾಜಕೀಯ ಉದ್ದೇಶಕ್ಕಾಗಿ ಅಂಥ ವ್ಯಕ್ತಿಗೆ ಅಂಥ ದೇಣಿ ಗೆ. ಚ ಂ ದಾ ಅಥವಾ ಸ ಂ ದಾಯದ ಮೊಬಲಗಿನ ವಂತಿಗೆಯಾಗಿದೆಯೆಂದು ಸಹ ಭಾವಿಸತಕ್ಕದ್ದು.

(ಬಿ) ಸ್ಮರಣ ಸಂಚಿಕೆ, ಕಿರು ಹೊತ್ತಿಗೆ, ಲಘು ಪುಸ್ತಿಕೆ, ಭಿತ್ತಿಪತ್ರ ಅಥವಾ ಇನ್ನಿತರ ಸ್ವರೂಪದಲ್ಲಿರುವ ಯಾವುದೇ ಪ್ರಕಟಣೆಯಲ್ಲಿನ ಜಾಹೀರಾತಿನ ಮೇಲೆ ಕಂಪನಿಯು ನೇರವಾಗಿ ಅಥವಾ ಪರೋಕ್ಷವಾಗಿ ಭರಿಸಿದ ವೆಚ್ಚದ ಮೊಬಲಗನ್ನು,

(i) ಅಂಥ ಪ್ರಕಟಣೆಯು, ರಾಜಕೀಯ ಪಕ್ಷದ್ದಾಗಿದ್ದಲ್ಲಿ ಅಥವಾ ಆ ರಾಜಕೀಯ ಪಕ್ಷದ ಪರವಾಗಿದ್ದಲ್ಲಿ, ಅದು ಅಂಥ ರಾಜಕೀಯ ಪಕ್ಷಕ್ಕೆ ನೀಡಿದ ಅಂಥ ಮೊಬಲಗಿನ ವಂತಿಗೆಯಾಗಿದೆ ಎಂದು ಮತ್ತು

(ii) ಅಂಥ ಪ್ರಕಟಣೆಯು, ರಾಜಕೀಯ ಪಕ್ಷದ್ದಾಗಿರದೆ ಅಥವಾ ಅದರ ಪರವಾಗಿರದೆ, ರಾಜಕೀಯ ಪಕ್ಷದ ಅನುಕೂಲಕ್ಕಾಗಿದ್ದಲ್ಲಿ, ಅದನ್ನು ಆ ರಾಜಕೀಯ ಪಕ್ಷಕ್ಕೆ ನೀಡಿದ ವಂತಿಗೆ ಎ 0 ಬುದಾಗಿ, ಭಾವಿಸತಕ್ಕದ್ದು.

(3) ಪ್ರತಿಯೊಂದು ಕಂಪನಿಯು, ತನ್ನ ಲಾಭ ಮತ್ತು ನಷ್ಟದ ಲೆಕ್ಕದಲ್ಲಿ, ಆ ಲೆಕ್ಕವು ಸಂಬಂಧಪಡುವ ಹಣಕಾಸು ವರ್ಷದಲ್ಲಿ, ಈ ಪ್ರಕರಣದ ಅಡಿಯಲ್ಲಿ ಅದು ವಂತಿಗೆಯಾಗಿ ನೀಡಿದ ಒಟ್ಟು ಮೊಬಲಗನ್ನು ಬಹಿರಂಗಪಡಿಸತಕ್ಕದ್ದು.

(3ಎ) (1) ನೇ ಉಪ-ಪ್ರಕರಣದಲ್ಲಿ ಏನೇ ಇದ್ದರೂ, ಈ ಪ್ರಕರಣದ ಅಡಿಯಲ್ಲಿ, ಬ್ಯಾಂಕಿನಿಂದ ಪಡೆದ ಖಾತೆದಾರನ (ಅಕೌಂಟ್ ಪೇಯೀ) ಚೆಕ್ ಅಥವಾ ಖಾತೆದಾರನ (ಅಕೌಂಟ್ ಪೇಯಿ) ಬ್ಯಾಂಕ್ ಡ್ರಾಫ್ಟ್ ಅಥವಾ ಬ್ಯಾಂಕ್ ಖಾತೆಯ ಮುಖಾಂತರ ವಿದ್ಯುನ್ಮಾನ ತೀರುವಳಿ (ಎಲೆಕ್ಟ್ರಾನಿಕ್ ಕ್ಲಿಯರಿಂಗ್) ವ್ಯವಸ್ಥೆಯ ಬಳಕೆ ಮೂಲಕ ಹೊರತು, ವಂತಿಗೆಯನ್ನು ಸಂದಾಯ ಮಾಡತಕ್ಕದ್ದಲ್ಲ;

ಪರಂತು, ರಾಜಕೀಯ ಪಕ್ಷಗಳಿಗೆ ವಂತಿಗೆ ನೀಡಲು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ಅಧಿಸೂಚಿಸಿದ ಯಾವುದೇ ಯೋಜನೆಯನ್ನು (ಸ್ಕೀಮ್) ಅನುಸರಿಸಿ ಯಾವುದೇ ಲಿಖಿತದ ಮುಖಾಂತರ ಕಂಪನಿಯು ವಂತಿಗೆ ನೀಡಬಹುದು.

( 4) ಈ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ ಕಂಪನಿಯು ಯಾವುದೇ ವಂತಿಗೆಯನ್ನು ನೀಡಿದರೆ, ಆ ಕಂಪನಿಯು ಹಾಗೆ ವಂತಿಗೆ ನೀಡಲಾದ ಮೊಬಲಗಿನ ಐದು ಪಟ್ಟು ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತವಾಗತಕ್ಕದ್ದು ಮತ್ತು ಕಂಪನಿಯ ಪ್ರತಿಯೊಬ್ಬ ತಪ್ಪಿತಸ್ಥ ಅಧಿಕಾರಿಯು, ಆರು ತಿಂಗಳಿಗೆ ವಿಸ್ತರಿಸಬಹುದಾದ ಅವಧಿಯವರೆಗೆ ಕಾರಾವಾಸದಿಂದ ಮತ್ತು ಹಾಗೆ ವಂತಿಗೆ ನೀಡಲಾದ ಮೊಬಲಗಿನ ಐದು ಪಟ್ಟು ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

ವಿವರಣೆ.- ಈ ಪ್ರಕರಣದ ಉದ್ದೇಶಗಳಿಗಾಗಿ, ' ರಾಜಕೀಯ ಪಕ್ಷ ' ಎಂದರೆ, ಜನತಾ ಪ್ರಾತಿನಿಧ್ಯ ಅಧಿನಿಯಮ, 1951 ರ (1951 ರ 43) 29 ಎ ಪ್ರಕರಣದ ಅಡಿಯಲ್ಲಿ ನೋಂದಾಯಿತವಾದ ಒಂದು ರಾಜಕೀಯ ಪಕ್ಷ

9. ಹಿಂದಿನ ಅಧಿನಿಯಮದ ಮೂಲಕ ಹೋಗುವುದಾದರೆ, ಪ್ರತಿಯೊಂದು ಕಂಪನಿಯು ತನ್ನ ಲಾಭ ಮತ್ತು ನಷ್ಟದ ಖಾತೆಯನ್ನು ಬಹಿರಂಗಪಡಿಸಬೇಕೆಂದು, ಅದರಲ್ಲಿ ಹಣಕಾಸಿನ ವರ್ಷದಲ್ಲಿ ಯಾವುದೇ ರಾಜಕೀಯ ಪಕ್ಷಕ್ಕೆ ವಂತಿಗೆ ನೀಡಿದ ಮೊಬಲಗನ್ನು ಘೋಷಿಸಬೇಕೆಂದು ಸಹ ಸ್ಪಷ್ಟಪಡಿಸುತ್ತದೆ.ಆದರೆ, ಅಧಿನಿಯಮದ 182 ( 3) ನೇ ಪ್ರಕರಣಕ್ಕೆ ಆದ ತಿದ್ದುಪಡಿಯ ಮೂಲಕ ಪ್ರತ್ಯಾಯೋಜಿಸಲಾಗಿದ್ದು ಮತ್ತು ಈಗ ಹಣಕಾಸು ವರ್ಷದಲ್ಲಿ ಮಾಡಲಾದ ಒಟ್ಟು ವಂತಿಗೆಯ ಬಗ್ಗೆ ಮಾತ್ರ ಬಹಿರಂಗಪಡಿಸಬೇಕಿದೆ.ಈ ನಿಟ್ಟಿನಲ್ಲಿ, ಈಗ ತಿದ್ದುಪಡಿಯ ತರುವಾಯ, ಯಾವುದೇ ರಾಜಕೀಯ ಪಕ್ಷದ ಸಂಬಂಧದಲ್ಲಿ ಘೋಷಣೆಯನ್ನು ಮಾಡುವುದು ಅಗತ್ಯವಿಲ್ಲವೆಂಬುದನ್ನು ಸ್ಪಷ್ಟಪಡಿಸುತ್ತದೆ.ಆದರೆ, ಪ್ರತ್ಯರ್ಜಿದಾರರ ಪರ ಮಾನ್ಯ ವಕೀಲರು, ಬಹಿರಂಗಪಡಿಸುವುದು ಕಡ್ಡಾಯವೆಂದು ಸರಿಯಾಗಿ ವಾದಿಸಿದ್ದಾರೆ.ಬಳಸಲಾದ ಪದವು " ತಕ್ಕದ್ದು " ಎಂಬುದಾಗಿದೆ.ಈ ಸಂಬಂಧದಲ್ಲಿ, ಸಂಪೂರ್ಣ ಎಂದರೆ, ಪ್ರಕರಣದ ಅಕ್ಷರ ಮತ್ತು ಅರ್ಥವನ್ನು 0 ಗಣನೆಗೆ ತೆಗೆದುಕೊಂಡರೆ ಈ ಸಂಬಂಧದಲ್ಲಿ ಮಾಡಲಾದ ಯಾವುದೇ ವಂತಿಗೆಯನ್ನು ಬಹಿರಂಗಪಡಿಸದೇ ಇರುವುದಕ್ಕೆ ಯಾವುದೇ ಕಂಪನಿಗೆ ವಿನಾಯಿತಿ ನೀಡಲಾಗಿಲ್ಲ.ಆದಾಗ್ಯೂ, ಮಾಡಿದ ಇತರ ಘೋಷಣೆಯೊಂದಿಗೆ ಸಂಯೋಜಿತವಾಗಿ ಸಿ.ಎಸ್.ಆರ್. ಘೋಷಣೆಯನ್ನು, ಅಧಿನಿಯಮದ 182 ನೇ ಪ್ರಕರಣದ ಅಡಿಯಲ್ಲಿ ಉದ್ದೇಶಿಸಲಾದಂಥ ಘೋಷಣೆಯಾಗಿಲ್ಲವೆಂಬುದನ್ನು ಪರಿಗಣಿಸಲಾಗುತ್ತದೆಯೆಂದು ಪರಿಗಣನೆಗೆ ಉಳಿದಿರುವ ಏಕೈಕ ಪ್ರಶ್ನೆಯಾಗಿದೆ.ಸಂಕ್ಷಿಪ್ತತೆಯ ಉದ್ದೇಶಕ್ಕಾಗಿ, ನಾನು, ಅಧಿನಿಯಮದ 135 ನೇ ಪ್ರಕರಣವನ್ನು ಉಲ್ಲೇಖಿಸಿದ್ದೇನೆ.ಅದನ್ನು ಈ ಮುಂದಿನಂತೆ ಓದಲಾಗಿದೆ:

"135. ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ:

(1) ಯಾವುದೇ ಹಣಕಾಸು ವರ್ಷದಲ್ಲಿ, ಐದು ನೂರು ಕೋಟಿ ಅಥವಾ ಅದಕ್ಕಿಂತ ಹೆಚ್ಚಿನ ರೂಪಾಯಿಗಳ ನಿವ್ವಳ ಮೌಲ್ಯ ಅಥವಾ ಒಂದು ಸಾವಿರ ಕೋಟಿ ಅಥವಾ ಅದಕ್ಕಿಂತ ಹೆಚ್ಚಿನ ರೂಪಾಯಿಗಳ ವಹಿವಾಟು ಅಥವಾ ಐದು ಕೋಟಿ ಅಥವಾ ಅದಕ್ಕಿಂತ ಹೆಚ್ಚಿನ ರೂಪಾಯಿಗಳ ನಿವ್ವಳ ಲಾಭ ಹೊಂದಿರುವ ಪ್ರತಿಯೊಂದು ಕಂಪನಿಯು, ಮೂರು ಅಥವಾ ಅದಕ್ಕಿಂತ ಹೆಚ್ಚಿನ ನಿರ್ದೇಶಕರನ್ನು ಒಳಗೊಂಡ ಮಂಡಳಿಯ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಸಮಿತಿಯನ್ನು ರಚಿಸತಕ್ಕದ್ದು ಮತ್ತು ಅವರಲ್ಲಿ ಕನಿಷ್ಠ ಒಬ್ಬ ಬ ನಿರ್ದೇಶಕರು ಸ್ವತಂತ್ರ ನಿರ್ದೇಶಕರಾಗಿರತಕ್ಕದ್ದು.

( 2) 134 ನೇ ಪ್ರಕರಣದ ( 3) ನೇ ಉಪ-ಪ್ರಕರಣದ ಅಡಿಯಲ್ಲಿ ಮಂಡಳಿಯ ವರದಿಯು, ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಸಮಿತಿಯ ಸಂರಚನೆಯನ್ನು ಪ್ರಕಟಪಡಿಸತಕ್ಕದ್ದು.

( 3) ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಸಮಿತಿಯು,

ಎ. ಸಾಂಸ್ಥಿಕ ಹೊಣೆಗಾರಿಕೆ ಕಾರ್ಯನೀತಿಯನ್ನು ರೂಪಿಸಿ ಅದನ್ನು ಅನುಷ್ಠಾನಗೊಳಿಸುವಂತೆ ಮಂಡಳಿಗೆ ಶಿಫಾರಸ್ಸು ಮಾಡತಕ್ಕದ್ದು.ಸದರಿ ಈ ನೀತಿಯು VII ನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದಂತೆ ಕಂಪನಿಯು ಕೈಗೊಳ್ಳಬೇಕಾದ ಕಾರ್ಯಚಟುವಟಿಕೆಗಳನ್ನು ಸೂಚಿಸತಕ್ಕದ್ದು;

ಬಿ. ಖಂಡ ( ಎ) ಯಲ್ಲಿ ಉಲ್ಲೇಖಿಸಲಾದ ಕಾರ್ಯಚಟುವಟಿಕೆಗಳ ಸಂಬಂಧದಲ್ಲಿ ಭರಿಸಬೇಕಾದ ವೆಚ್ಚದ ಮೊಬಲಗನ್ನು ಶಿಫಾರಸು ಮಾಡತಕ್ಕದ್ದು ಮತ್ತು ಸಿ. ಕಾಲಕಾಲಕ್ಕೆ ಕಂಪನಿಯ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯ ಕಾರ್ಯನೀತಿಯನ್ನು ಮೇಲ್ವಿಚಾರಣೆ ಮಾಡತಕ್ಕದ್ದು.

( 4) ಉಪ-ಪ್ರಕರಣ ( 1) ರಲ್ಲಿ ಉಲ್ಲೇಖಿಸಲಾದ ಪ್ರತಿಯೊಂದು ಕಂಪನಿಯ ಮ ಂ ಡಳಿಯು,

ಎ. ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಸಮಿತಿಯು ಮಾಡಿದ ಶಿಫಾರಸುಗಳನ್ನು ಪರಿಗಣಿಸಿದ ತರುವಾಯ, ಕ ಂ ಪನಿಯ ಸಾ ಂ ಸ್ಥಿಕ ಸಾಮಾಜಿಕ ಹೊಣೆಗಾರಿಕೆ ಕಾರ್ಯನೀತಿಯನ್ನು ಅನುಮೋದಿಸತಕ್ಕದ್ದು ಮತ್ತು ಅದರ ವರದಿಯಲ್ಲಿ ಅಂಥ ಕಾರ್ಯನೀತಿಯ ವಿಷಯಗಳನ್ನು ಬಹಿರಂಗಪಡಿಸತಕ್ಕದ್ದು ಮತ್ತು ಕಂಪನಿಯ ವೆಬ್ಸೈಟ್ ಯಾವುದಾದರೂ ಇದ್ದರೆ, ಅದರಲ್ಲಿ ನಿಯಮಿಸಿರ ಬಹುದಾದಂಥ ರೀತಿಯಲ್ಲಿ, ಅದನ್ನು ಅಪ್ಲೋಡ್ ಸಹ ಮಾಡತಕ್ಕದ್ದು; ಮತ್ತು

ಬಿ. ಕಂಪನಿಯ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಕಾರ್ಯನೀತಿಯಲ್ಲಿ ಒಳಗೊ ಂ ಡಿರುವ ಕಾ ಂ ಯ ೯ ಚಟುವಟಿಕೆಗಳನ್ನು ಕಂಪನಿಯು ಕೈಗೊಂಡಿದೆಯೆಂಬುದನ್ನು ಸುನಿಶ್ಚಿತಪಡಿಸಿಕೊಳ್ಳತಕ್ಕದ್ದು.

( 5) ಉಪ-ಪ್ರಕರಣ ( 1) ರಲ್ಲಿ ಉಲ್ಲೇಖಿಸಲಾದ ಪ್ರತಿಯೊಂದು ಕಂಪನಿಯ ಮಂಡಳಿಯು, ಕಂಪನಿಯ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಕಾರ್ಯನೀತಿಗೆ ಅನುಸಾರವಾಗಿ, ನಿಕಟತಮ ಮೂರು ಹಿಂದಿನ ಹಣಕಾಸು ವರ್ಷಗಳಲ್ಲಿ ಮಾಡಿದ ಕಂಪನಿಯ ಸರಾಸರಿ ನಿವ್ವಳ ಲಾಭಗಳ ಕನಿಷ್ಠ ಶೇಕಡಾ ಎರಡರಷ್ಟು ಲಾಭವನ್ನು ಪ್ರತಿ ಹಣಕಾಸು ವರ್ಷದಲ್ಲಿ ಅದು ಖರ್ಚು ಮಾಡಿದೆ ಎಂಬುದನ್ನು ಸುನಿಶ್ಚಿತಪಡಿಸಕೊಳ್ಳತಕ್ಕದ್ದು:

ಪರಂತು, ಕಂಪನಿಯು, ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಕಾರ್ಯಚಟುವಟಿಕೆಗಳಿಗಾಗಿ ಮೀಸಲಿಟ್ಟ ಮೊಬಲಗನ್ನು ಖರ್ಚು ವಾಡ ಲು ಸ್ಥಳೀಯ ಪ್ರದೇಶ ಕ್ಕೆ ಮತ್ತು ಮತ್ತು ತಾನು @ ಕಾರ್ಯನಿರ್ವಹಿಸುತ್ತಿರುವ ಸುತ್ತಮುತ್ತಲಿನ ಪ್ರದೇಶಗಳಿಗೆ ಆದ್ಯತೆಯನ್ನು ನೀಡತಕ್ಕದ್ದು:

ಮತ್ತೂ ಪರಂತು, ಕಂಪನಿಯು ಅಂಥ ಮೊಬಲಗನ್ನು ಖರ್ಚು ಮಾಡಲು ವಿಫಲವಾದರೆ, ಮಂಡಳಿಯು, 134 ನೇ ಪ್ರಕರಣದ (1) ನೇ ಉಪ-ಪ್ರಕರಣದ (ಓ) ಖಂಡದ ಅಡಿಯಲ್ಲಿ ಸಲ್ಲಿಸಿದ ತನ್ನ ವರದಿಯಲ್ಲಿ ಆ ಮೊಬಲಗನ್ನು ಖರ್ಚು ಮಾಡದೇ ಇರುವುದಕ್ಕೆ ಕಾರಣಗಳನ್ನು ನಿರ್ದಿಷ್ಟಪಡಿಸತಕ್ಕದ್ದು.

ವಿವರಣೆ:ಈ ಪ್ರಕರಣದ ಉದ್ದೇಶಗಳಿಗಾಗಿ " ಸರಾಸರಿ ನಿವ್ವಳ ಲಾಭ " ವನ್ನು 198 ನೇ ಪ್ರಕರಣದ ಉಪಬಂಧಗಳಿಗನುಸಾರವಾಗಿ ಲೆಕ್ಕಹಾಕತಕ್ಕದ್ದು."

10. ಅಧಿನಿಯಮದ 135 ನೇ ಪ್ರಕರಣವನ್ನು ನಿಕಟವಾಗಿ ಓದಿದ ತರುವಾಯ, ಸಾಂಸ್ಥಿಕ ಕ ಸಾಮಾಜಿಕ ಹೊಣೆಗಾರಿಕೆ ಘೋಷಣೆಯನ್ನು, ಅದರಲ್ಲಿ ಹೇಳಲಾದಂತೆ ನಿಯಮಿಸಲಾದ ನಮೂನೆಯಲ್ಲಿ ಮಾಡಬೇಕಾಗಿದೆ ಎಂಬುದು ಅತ್ಯಂತ ಸ್ಪಷ್ಟವಾಗುತ್ತದೆ.ವಾದದ ಸಮಯದಲ್ಲಿ, 1,36,39,924/- ರೂ.ಗಳು ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಮೊಬಲಾಗಿದೆ ಎಂದು ಘೋಷಣೆ ಮಾಡಲಾಗಿದೆ.ನಿಯಮಿಸಲಾದ ನಮೂನೆಯಲ್ಲಿ ಅರ್ಜಿದಾರರ ಪರ ಮಾನ್ಯ ವಕೀಲರು ಈ ನ್ಯಾಯಾಲಯದ ಗಮನಕ್ಕೆ ತಂದಿದ್ದಾರೆ.ಖರ್ಚು-ವೆಚ್ಚಗಳ ಪಟ್ಟಿಯಲ್ಲಿ ಘೋಷಿಸಲಾಗಿರುವ 15,00,000/-ರೂಪಾಯಿಗಳ ಬಾಕಿ ಮೊಬಲಗನ್ನು ರಾಜಕೀಯ ಘೋಷಣೆ ಅಲ್ಲದೆ ಮತ್ತೇನೂ ಅಲ್ಲ ಮತ್ತು ಸದರಿ ಮೊಬಲಗು ರಾಜಕೀಯ ಪಕ್ಷಕ್ಕೆ ಎಂದರೆ, ಆಮ್ ಆದ್ಮಿ ಪಕ್ಷಕ್ಕೆ ನೀಡಲಾಗಿದೆ ಮತ್ತು ಸದರಿ ಮೊಬಲಗನ್ನುಸಂಖ್ಯೆ: 148371 ಹೊಂದಿರುವದಿನಾಂಕ: 31.12.2016 ರ ಚೆಕ್ ಮುಖಾಂತರ ಸಂದಾಯ ಮಾಡಲಾಗಿದೆ ಎಂದು ಸಹದಿನಾಂಕ: 06.03.2019 ರ ಪ್ರತ್ಯುತ್ತರದಲ್ಲಿ ತಿಳಿಸಲಾಗಿದೆ ಎಂಬುದು ಮಾನ್ಯ ಹಿರಿಯ ವಕೀಲರ ವಾದವಾಗಿದೆ.

11. ಮುಖ್ಯ ಸಂಗತಿಗಳನ್ನು ಮತ್ತು ಸನ್ನಿವೇಶಗಳನ್ನು ಪರಿಗಣಿಸಲಾಗಿ, ಕಾನೂನಿನ ಅಡಿಯಲ್ಲಿ ಘೋಷಣೆಯನ್ನು ಪ್ರತ್ಯೇಕವಾಗಿ ಮಾಡಬೇಕಾಗಿದೆ ಎಂದಿದ್ದರೂ ಸಹ, ಪ್ರತ್ಯುತ್ತರದಲ್ಲೂ ಪ್ರತ್ಯರ್ಜಿದಾರರ ಪರ ಮಾನ್ಯ ವಕೀಲರು ಸರಿಯಾಗಿಯೇ ಗಮನ ಸೆಳೆದಿರುವಂತೆ, ಹಣಕಾಸು ವಿವರ-ಪಟ್ಟಿಯಲ್ಲಿ ಕಂಪನಿಯು ಅಧಿನಿಯಮದ 182 ( 3) ನೇ ಪ್ರಕರಣದ ಮೇರೆಗೆ ಪ್ರತ್ಯೇಕವಾಗಿ ಬಹಿರಂಗಪಡಿಸುವುದು ಅಜಾಗರೂಕತೆಯಿಂದ ಬಿಟ್ಟು ಹೋಗಿದೆ ಎಂದು ನಿರ್ದಿಷ್ಟವಾಗಿ ಉಲ್ಲೇಖಿಸಲಾಗಿದೆ ಎಂಬುದು ಸೂಚಿತವಾಗುತ್ತದೆ.ಆದರೆ, ವಾಸ್ತವಿಕ ವಿವರಗಳ ಆಧಾರದ ಮೇಲೆ ಇದನ್ನು ಪರಿಗಣನೆಗೆ ತೆಗೆದುಕೊಂಡರೆ, 15,00,000/- ರೂ.ಗಳ ಸದರಿ ಮೊಬಲಗನ್ನು ಖಾತಾದಾರನ ಚೆಕ್ ಮುಖಾಂತರ ಆಮ್ ಆದ್ಮಿ ಪಕ್ಷಕ್ಕೆ ಸಂದಾಯ ಮಾಡಲಾಗಿದ್ದು, ಅದಕ್ಕೆ ಸಂಬಂಧಿಸಿದಂತೆ ಘೋಷಣೆಯನ್ನು ಸಹ ಮಾಡಲಾಗಿದೆ.

12. ಕಾನೂನಿನ ಉದ್ದೇಶ ಮತ್ತು ಆಶಯವನ್ನು ಪರಿಗಣನೆಗೆ ತೆಗೆದುಕೊಂಡಲ್ಲಿ, ದೊಡ್ಡ ಪ್ರಮಾಣದಲ್ಲಿ ಅಂಥ ದೇಣಿಗೆಗಳನ್ನು ನೀಡಿದಾಗ, ಅದು ದೇಶದ ಆರ್ಥಿಕತೆಯ ಮೇಲೆ ಪರಿಣಾಮ ಬೀರಬಾರದು ಎಂಬುದು ಕಾನೂನಿನ ಮುಖ್ಯ ಉದ್ದೇಶವಾಗಿದೆ ಮತ್ತು ತದನಂತರದ ತಿದ್ದುಪಡಿಯು ಸಹ, ಚೆಕ್ ಮೂಲಕ ಹಣ ಸಂದಾಯ ಮಾಡಬೇಕೆಂಬ ಅಂಶವನ್ನು ವ್ಯಕ್ತಪಡಿಸುತ್ತದೆ ಎಂಬುದು ಸೂಚಿತವಾಗುತ್ತದೆ.ಅಕ್ಷರಶಃ ಮತ್ತು ಭಾವಶಃ ಅದನ್ನು ಗಣನೆಗೆ ತೆಗೆದುಕೊಂಡರೆ, ಇದು ಒಂದು ಕಾನೂನುಬಾಹಿರವಲ್ಲದ ಕ್ರಮ ದೋಷವಾಗಿದೆ.ದಿನಾಂಕ: 1.04.2017 ರಿಂದ ತಿದ್ದುಪಡಿ ಜಾರಿಗೆ ಬಂದಿದ್ದರೂ ಸಹ, ಅದರಲ್ಲಿ ಮೊಬಲಗನ್ನು ಸಂದಾಯ ಮಾಡಿದ ರಾಜಕೀಯ ಪಕ್ಷದ ಹೆಸರನ್ನು ಘೋಷಿಸುವ ಅಗತ್ಯವಿಲ್ಲ.ಈ ಹಿನ್ನೆಲೆಯಲ್ಲೂ ಸಹ, ಅಧಿನಿಯಮದ 182 ನೇ ಪ್ರಕರಣದ ಉದ್ದೇಶಪೂರ್ವಕ ಉಲ್ಲಂಘನೆಯಾಗಿಲ್ಲ.ಆದಾಗ್ಯೂ, ಅರ್ಜಿದಾರರು/ಆಪಾದಿತರು ಪ್ರತಿಷ್ಠಿತ ಕಂಪನಿಯಾಗಿದ್ದು, ಘೋಷಣೆಯನ್ನು ಮಾಡುವಾಗ ಅವರು ಸದರಿ ಅಂಶವನ್ನು ಗಣನೆಗೆ ತೆಗೆದುಕೊಳ್ಳಬಹುದಾಗಿತ್ತಾದರೂ, ಅದು ಉದ್ದೇಶಪೂರ್ವಕ ಕೃತ್ಯವಲ್ಲ.ಆಪಾದಿತನನ್ನು ಯಾವುದೇ ಅಪರಾಧಕ್ಕಾಗಿ ದಂಡಿಸುವಾಗ ಉದ್ದೇಶ ಮತ್ತು ಆಪರಾಧಿಕ ಮನಸ್ಸನ್ನು ನೋಡಬೇಕಾಗುತ್ತದೆ.ಆ ಹಿನ್ನೆಲೆಯಲ್ಲಿ, ವ್ಯವಹರಣೆಗಳ ಪ್ರಾರಂಭವು, ಕಾನೂನಿನ ಅಡಿಯಲ್ಲಿ ಪರ್ಯಾಲೋಚಿಸಿದಂತೆ ಪ್ರಸ್ತುತವಾಗಿರುವುದಿಲ್ಲ ಮತ್ತು ಅರ್ಜಿಯನ್ನು ಪುರಸ್ಕರಿಸುವ ಮೂಲಕ ಸದರಿ ವ್ಯವಹರಣೆಗಳನ್ನು ರದ್ದುಗೊಳಿಸಿದರೆ, ಅದು ನ್ಯಾಯದ ಉದ್ದೇಶಗಳನ್ನು ಈಡೇರಿಸುತ್ತದೆ ಎಂಬುದು ನನ್ನ ಪರಿಗಣಿತ ಅಭಿಪ್ರಾಯವಾಗಿದೆ.

13. ಈ ಹಿನ್ನೆಲೆಯಲ್ಲಿ, ಅರ್ಜಿಯನ್ನು ಪುರಸ್ಕರಿಸಲಾಗಿದೆ ಮತ್ತು ವಿಶೇಷ ಆರ್ಥಿಕ ಅಪರಾಧ ಸಂಬಂಧಿ ನ್ಯಾಯಾಲಯದ ಕಡತದಲ್ಲಿ ಇತ್ಯರ್ಥದಲ್ಲಿರುವ ಅಧಿನಿಯಮದ 182 ( 3) ನೇ ಪ್ರಕರಣದ ಅಡಿಯಲ್ಲಿ ದಂಡನೀಯವಾದ ಅಪರಾಧಕ್ಕಾಗಿ ಸಿ.ಸಿ.ಸಂಖ್ಯೆ: 134/2019 ರಲ್ಲಿ ಪ್ರಾರಂಭಿಸಲಾದ ವ್ಯವಹರಣೆಗಳನ್ನು ಈ ಮೂಲಕ ರದ್ದುಗೊಳಿಸಲಾಗಿದೆ.

ಐ.ಎ.ಸಂಖ್ಯೆ: 1/2019 ಪರಿಗಣನೆಗೆ ಉಳಿಯುವುದಿಲ್ಲ.ತದನುಸಾರವಾಗಿ, ಅದನ್ನು ವಿಲೆ ಮಾಡಲಾಗಿದೆ.